ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ 19ನೇ ಸೆಪ್ಟಂಬರ್ 1994

19TH September 1994

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳ್ಳಿಗೆ 11 ಗಂಟೆಗೆ
ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ವಿ. ಎಸ್ ಕೌಜಲಗಿ) ಅವರು
ಪೀಠದಲ್ಲಿ ಉಪಸ್ಥಿತರಿದ್ದರು.

ಸಭೆಯ ಮುಂದಿಡಲಾದ ಕಾಗದಪತ್ರಗಳು

I **ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು):- ಮಾನ್ಯ ಅಧ್ಯಕ್ಷರೆ, 1978ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅದಿನಿಯಮದ 8(3)ನೇ ಕಲಮಿನ ಮೇರೆಗೆ,**

1. ಭೂ ಮಾಪನಾ ಮತ್ತು ಭೂ ದಾಖಲೆಗಳ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1990ಕ್ಕೆ ಎರಡನೇ ದರ್ಜೆ ಭೂಮಾಪಕರ ಹುದ್ದೆಗಳಿಗೆ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 14.7.94 ರಂದು ಹೊರಡಿಸಲಾದ ಸಿಆಸುಇ 38 ಸೇನಿಇ 93ನೇ ಕ್ರಮಾಂಕದ ಅಧಿಸೂಚನೆ,

1979ನೇ ಇಸವಿಯ ಕರ್ನಾಟಕ ಸರಕುಗಳ ಮೇಲಿನ ಪ್ರವೇಶ ತೆರಿಗೆ ಕಾಯ್ದೆ 30(5)ನೇ ಕಲಮಿನ ಮೇರೆಗೆ,

2. ಆಮದು ಮಾಡಿಕೊಂಡ ಸಕ್ಕರೆಯನ್ನು ನ್ಯಾಯ ಬೆಲೆ ಅಂಗಡಿ ಮೂಲಕ ಮಾರಾಟ ಮಾಡುವ ಸರಕುಗಳ ಪ್ರವೇಶ ತೆರಿಗೆ ವಿನಾಯಿತಿ ಸಂಬಂಧದಲ್ಲಿ ದಿನಾಂಕ 23.8.1994 ರಂದು ಹೊರಡಿಸಲಾದ ಎಫ್‌ಡಿ 99 ಸಿಇಟಿ 94ನೇ ಕ್ರಮಾಂಕದ ಅಧಿಸೂಚನೆ;

1993ನೇ ಇಸವಿಯ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 320ನೇ ಕಲಮಿನ ಮೇರೆಗೆ,

3. ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯಿತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ) ನಿಯಮಗಳು, 1994ರ ಸಂಬಂಧದಲ್ಲಿ ದಿನಾಂಕ 17.6.1994 ರಂದು ಹೊರಡಿಸಲಾದ ಗ್ರಾಅಪ 471 ಜಿಪಸ 94ನೇ ಕ್ರಮಾಂಕದ ಅಧಿಸೂಚನೆ,

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ನಿಯಮ 262(3)ರ ಮೇರೆಗೆ,

4. 1991-92ನೇ ಸಾಲಿನ ಮಂಡ್ಯಾ ಜಿಲ್ಲಾ ಪರಿಷತ್ತಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಲೆಕ್ಕಪತ್ರಗಳು,

5. 1990-91ನೇ ಸಾಲಿನ ಶಿವಮೊಗ್ಗ ಜಿಲ್ಲಾ ಪರಿಷತ್ತಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ,

6. 1991-92ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್‌ನ ಪ್ರಮಾಣೀಕೃತ ವಾರ್ಷಿಕ ಲೆಕ್ಕಗಳನ್ನು ಮಂಡಿಸುತ್ತೇನೆ.

II ಶ್ರೀ ಕೆ.ಎಚ್. ರಂಗನಾಥ್(ಲೋಕೋಪಯೋಗಿ ಮಂತ್ರಿ): -ಮಾನ್ಯ ಅಧ್ಯಕ್ಷರೆ,

1956ನೇ ಸಾಲಿನ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ,

1992-93ನೇ ಸಾಲಿನ ಕೊಂಕಣ ರೈಲ್ವೇ ನಿಗಮ ನಿಯಮಿತದ 3ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

III. ಶ್ರೀ ಹಾರ್ನಳ್ಳಿ ರಾಮಸ್ವಾಮಿ(ಕಾನೂನು ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ (ಭಾರಿ ಮತ್ತು ಮಧ್ಯಮ ಕೈಗಾರಿಕ ಮಂತ್ರಿ) ಅವರ ಪರವಾಗಿ:

1956ನೇ ಸಾಲಿನ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ,

1. 1992-93ನೇ ಸಾಲಿನ ಕರ್ನಾಟಕ ಇಂಪ್ಲಿಮೆಂಟ್ಸ್ ಮತ್ತು ಮೆಶಿನರೀಸ್ ಕಂಪನಿ ನಿಯಮಿತದ 18ನೇ ವಾರ್ಷಿಕ ವರದಿ;

2. 1992-93ನೇ ಸಾಲಿನ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಶನ್ ನಿಯಮಿತದ 19ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

IV. **ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಮಂತ್ರಿ) :-** ಮಾನ್ಯ ಅಧ್ಯಕ್ಷರೆ,

1963ರ ಕೃಷಿ ವಿಶ್ವವಿದ್ಯಾನಿಲಯಗಳ ಕಾಯ್ದೆಯ 38(3)ನೇ ಕಲಮಿನ ಮೇರೆಗೆ,

1992-93ನೇ ಸಾಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನಾ ವರದಿ ಮತ್ತು ಉತ್ತರಗಳನ್ನು ಮಂಡಿಸುತ್ತೇನೆ.

2. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ, ಕ.ವಿ. ಮಂಡಲ :- ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ, ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೆನೆ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1.	ಯೋಜನೆಯಿಂದಾಗಿ ಸ್ಥಳಾಂತರಿತ ವ್ಯಕ್ತಿಗಳ ಪುನರ್ವ್ಯವಸ್ಥೆಯ ಕರ್ನಾಟಕ ವಿಧೇಯಕ, 1987	12-12-1993	ರಾಷ್ಟ್ರಪತಿಯವರು
2.	ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ, 1990	28-07-1994	ರಾಷ್ಟ್ರಪತಿಯವರು

3. **ಶಾಸನ ರಚನೆ**

ಅ. ವಿಧೇಯಕವನ್ನು ಮಂಡಿಸುವುದು :

1994ರ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಚೌಡರೆಡ್ಡಿ (ಗೃಹಮಂತ್ರಿ) :- ಸನ್ಮಾನ್ಯ ಅಧ್ಯಕ್ಷರೇ, 1994ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾಪ ಏನೆಂದರೆ,'' 1994ನೇ ಸಾಲಿನ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು. ''